<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿ.ಸಿ ನಂಬ್ರಃ **1517/2023** ಪಿಡಬ್ಲ್ಯೂ-**1**

ದಿನಾಂಕಃ 13-02-2025 ರಂದು ಸಾಕ್ಷಿಯನ್ನು ಪುನಹ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ಆರ್ ಎನ್ ರವರಿಂದ:</u>

ಆರೋಪಿಗೆ ಎಷ್ಟು ಹಣ ಸಾಲ ನೀಡಿದ್ದೇವೆ ಎಂಬ ಬಗ್ಗೆ ಸಾಲದ ಅರ್ಜಿ ಮತ್ತು ಮಂಜೂರಾತಿ ಅರ್ಜಿ ಇರುತ್ತದೆ. ಆ ಎರಡು ದಾಖಲೆಗಳು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಲ ಕೊಡುವಾಗ ಆ ಸಾಲದ 10% ಹಣವನ್ನು ಡಿಪಾಸಿಟ್ ಮಾಡಬೇಕೆಂದು ಮತ್ತು 5% ಷೇರನ್ನು ಖರೀದಿಸಬೇಕೆಂದು ನಿಬಂಧನೆ ಮಾಡುತ್ತೇವೆ. ಸಾಲವನ್ನು ಮುಟ್ಟುಗೋಲು ಹಾಕಿಕೊಳ್ಳುವ ಸಮಯದಲ್ಲಿ ಡಿಪಾಸಿಟ್ ಮತ್ತು ಷೇರನ್ನು ವಜಾ ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಈ ಪ್ರಕರಣಲ್ಲಿ 7 ಸಾವಿರ ಮೌಲ್ಯದ ಷೇರು ಮತ್ತು ರೂ.15 ಸಾವಿರ ಮೌಲ್ಯ ಡಿಪಾಸಿಟ್ ಇರುತ್ತದೆ. ನಾವು ಪ್ರಕರಣ ದಾಖಲಿಸುವ ಸಮಯದಲ್ಲಿ ಬಾಕಿ ಇದ್ದ ಹಣದ ಮೊತ್ತ ರೂ.1,50,893/-. ಸದರಿ ಮೊತ್ತ ಆ ಸಮಯದಲ್ಲಿ ಕ್ಲೋಸಿಂಗ್ ಬ್ಯಾಲೆನ್ಸ ಆಗಿರುತ್ತದೆ.

ಈ ಪ್ರಕರಣವನ್ನು ದಿಃ 04-05-2018 ರಲ್ಲಿ ದಾಖಲಿಸಿರುತ್ತೇವೆ. ಸಹಾಯಕ ನಿಬಂಧಕರ ನ್ಯಾಯಾಲಯದಲ್ಲಿ ಸಾಲ ವಸೂಲಾತಿಗಾಗಿ ಮತ್ತೊಂದು ಪ್ರಕರಣ ದಾಖಲಿಸಿರುತ್ತೇವೆ. ಆರೋಪಿಯ ಎಸ್ ಬಿ ಖಾತೆ ನಮ್ಮ ಸಂಸ್ಥೆಯಲ್ಲಿ ಇತ್ತು ಎಂದರೆ ಸರಿ. ದಿಃ 31-03-2023 ರಂದು ಆರೋಪಿಯ ಎಲ್ ಐ ಸಿ ಬಾಂಡನ್ನು ಸರಂಡರ್ ಮಾಡಿ ರೂ.58,000/- ಹಣವನ್ನು ಆತನ ಖಾತೆಗೆ ವರ್ಗಾಯಿಸಿರುತ್ತೇವೆ. ದಿಃ 18-04-2023 ರಂದು ಆರೋಪಿಯ ಮತ್ತೊಂದು ಬಾಂಡನ್ನು ಸರಂಡರ್ ಮಾಡಿ ರೂ.60,011/- ಹಣವನ್ನು ಆತನ ಖಾತೆಗೆ ವರ್ಗಾಯಿಸಿರುತ್ತೇವೆ. ಆರೋಪಿ ಎಷ್ಟು ಹಣ ಮರುಪಾವತಿಸಿರುತ್ತಾರೆ ಎಂದು ಲೆಕ್ಕ ಕೊಟ್ಟಿರುವುದಿಲ್ಲ. ಆರೋಪಿ ಮರುಪಾವತಿಸಿದ ಹಣಕ್ಕೆ ರಸೀದಿ ನೀಡುತ್ತೇವೆ.

ಆರೋಪಿಯು ಮಾಡಿದ ರೂ.15,000/- ಡಿಪಾಸಿಟ್ ಮತ್ತು ಎಲ್ ಐ ಸಿ ಬಾಂಡ ಹಣವನ್ನು ರೂ.1,18,131/- ಹಣವನ್ನು ಸಾಲಕ್ಕೆ ವಜಾ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಈ ಹಣವನ್ನು ಚೆಕ್ಕ ಬೌನ್ಸ ಪ್ರಕರಣ ದಾಖಲಿಸಿದ ನಂತರ ಪಡೆದುಕೊಂಡಿದ್ದೇವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಈ ಹಣವನ್ನು ಸಾಲಕ್ಕೆ ವಜಾ ಮಾಡಿಕೊಂಡ ಬಗ್ಗೆ ತಿಳಿಸಿರುವುದಿಲ್ಲ. ಆರೋಪಿ ಬಾಂಡ ಕ್ಲೋಸ ಮಾಡುವ ಬಗ್ಗೆ ಸಹಿ ಹಾಕಿ ಕೊಟ್ಟಿರುತ್ತಾರೆ. ಒಬ್ಬ ವ್ಯಕ್ತಿಯ ಎಸ್ ಬಿ ಖಾತೆಯಿಂದ ಹಣ ತೆಗೆಯಲು ಚೆಕ್ಕು ಬೇಕಾ ಎಂದರೆ ಸಾಕ್ಷಿ ಲೋನ್ ಇದ್ದಾಗ ಬೇಕಿಲ್ಲ ಎಂದು ನುಡಿದಿರುತ್ತಾರೆ. ಹಣವನ್ನು ಆರೋಪಿಯ ಖಾತೆಯಿಂದ ನಾವಾಗಿ ತೆಗೆಯಲು

ನಮ್ಮ ಪ್ರಧಾನ ಕಚೇರಿಯಿಂದ ತಿಳಿಸಿರುತ್ತಾರೆ. ಯಾವ ಕಾನೂನಿನ ಮೇರೆಗೆ ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ಸಂಪೂರ್ಣ ಹಣವನ್ನು ವಸೂಲು ಮಾಡಿದ ನಂತರವೂ ಸುಳ್ಳು ಪ್ರಕರಣ ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ನಮೂದಿಸಿದ ಮೊತ್ತ ಅಥವಾ ಯಾವುದೇ ಮೊತ್ತವನ್ನು ಕ್ಲೇಮ ಮಾಡುವ ಹಕ್ಕು ನಮಗೆ ಇಲ್ಲ ಎಂದರೆ ಸರಿಯಲ್ಲ. ಬಲಾತ್ಕಾರವಾಗಿ ಪಡೆದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ನಮ್ಮ ಸಂಸ್ಥೆಯ ಪರವಾಗಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿರುವ ಸಹಿ ಆರೋಪಿಯದ್ದಲ್ಲ, ನಮ್ಮ ಸಿಬ್ಬಂದಿಗಳ ಮೂಲಕ ದಾಖಲೆಗಳಲ್ಲಿರುವ ಸಹಿಯನ್ನು ನೋಡಿ ಆರೋಪಿಯ ಸಹಿಯನ್ನು ನಾವು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸುವ ಹಕ್ಕು ನಮಗೆ ಇಲ್ಲ ಮತ್ತು ಯಾವುದೇ ಬಾಕಿ ಹಣ ಬರಬೇಕಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ